# ಪುನರ್ಬಲನಕ್ಕಾಗಿ ಬೆರಳು ಗೊಂಬೆ ಮತ್ತು ವಿಸ್ತರಿತ ಕಪ್ಪು ಹಲಗೆ

ಸಾಯಿ ಪ್ರವೀಣ್ ಮದ್ದಿರಾಲ

ಅಂಗನವಾಡಿಗಳಲ್ಲಿ ಸಂವಾದ, ಕಥೆ ಹೇಳುವುದು, ಪ್ರಾಸಬದ್ಧ ಹಾಡು, ಆಟ ಮತ್ತು ಇತರ ಸೃಜನಶೀಲ ಮತ್ತು ಗ್ರಹಣಶಕ್ತಿಯ ಚಟುವಟಿಕೆಗಳ ಮೂಲಕ ಶಿಕ್ಷಕರು ಮಕ್ಕಳಿಗೆ ಕಲಿಕೆಯ ಅವಕಾಶಗಳನ್ನೊದಗಿಸುತ್ತಾರೆ. ಈ ಚಟುವಟಿಕೆಗಳ ಮೂಲಕ ಮಕ್ಕಳು ವಿವಿಧ ಪ್ರಮುಖ ಪರಿಕಲ್ಪನೆಗಳ ಬಗ್ಗೆ ತಿಳಿದುಕೊಳ್ಳುತ್ತಾರೆ. ಕಲಿಕೆಯು ಒಂದು ನಿರಂತರ ಪ್ರಕ್ರಿಯೆಯಾದ್ದರಿಂದ ಅದನ್ನು ಆಸಕ್ತಿಕರ ರೀತಿಗಳ ಮೂಲಕ ಬಲಪಡಿಸುವುದು ಆವಶ್ಯಕವಾಗಿದೆ. ಮಕ್ಕಳ ಕಲಿಕೆಯನ್ನು ಪುನರ್ಬಲಪಡಿಸಲು ಶಿಕ್ಷಕರು ವಿವಿಧ ವಿಧಾನಗಳನ್ನು ರೂಪಿಸಿ, ಪಾಲಿಸುತ್ತಾರೆ. ಈ ಲೇಖನದಲ್ಲಿ ನಾನು ಬೆರಳು ಗೊಂಬೆಗಳು ಮತ್ತು ವಿಸ್ತರಿತ ಕಪ್ಪು ಹಲಗೆಯನ್ನು ಬಳಸಿ ಹೇಗೆ ಮಕ್ಕಳ ಪರಿಕಲ್ಪನೆ ಮತ್ತು ವಿಷಯವಸ್ತುವಿನ ಕಲಿಕೆಯನ್ನು ಪುನರ್ಬಲನಗೊಳಸ–ಬಹುದೆಂದು ವಿವರಿಸುತ್ತೇನೆ. ಕಲಿಸುವ ಕಲಿಯುವ ಸಾಧನಗಳು (Teaching Learning Materials - TLM) ಶಿಕ್ಷಕರಿಗೆ ಹೊಸ ಪರಿಕಲ್ಪನೆಗಳನ್ನು ಸುಲಭವಾಗಿ ವಿವರಿಸಲು ಅನುವು–ಮಾಡಿಕೊಡುತ್ತಲೇ ಕಲಿಕೆಯ ಪುನರ್ಬಲನಕ್ಕೂ ಸಹಾಯ ಮಾಡುತ್ತವೆ. ಇದಲ್ಲದೆ ಟಿಎಲ್‌ಎಂಗಳು ಮಕ್ಕಳಿಗೆ ಒಂದು ಚಟುವಟಿಕೆಯಲ್ಲಿ ದೀರ್ಘಕಾಲದವರೆಗೆ ತೊಡಗಿಸಿಕೊಂಡಿರಲು ಪ್ರೇರೇಪಿಸುತ್ತವೆ.

ಸಮರ್ಪಕವಾದ ಮುಖಭಾವಗಳು ಮತ್ತು ಧ್ವನಿಯ ಏರಿಳಿತದ ಮೂಲಕ ಮೌಖಿಕವಾಗಿ ಕಥೆ ಹೇಳುವುದು ಮಕ್ಕಳಿಗೆ ಕಥೆಯ ಪಾತ್ರಗಳು ಮತ್ತು ಕಥೆಯ ಹಂದರದೊಡನೆ ಪರಿಚಯ ಮಾಡಿಕೊಳ್ಳಲು ಸಹಾಯ ಮಾಡುತ್ತವೆ. ಮೌಖಿಕವಾಗಿ ಕಥೆ ಹೇಳಿದ ನಂತರ, ಶಿಕ್ಷಕರು ಬೆರಳು ಬೊಂಬೆಗಳನ್ನು ಬಳಸಿ ಕಥೆಯಿಂದ ಕಲಿತಿದ್ದನ್ನು ಪುನರ್ಬಲನಗೊಳಸಲು ಸಾಧ್ಯವಾಗುತ್ತದೆ. ಇದನ್ನು ನಾನು ಮಾಡುವ ರೀತಿ ಇಂತಿದೆ.

## ಬೆರಳು ಗೊಂಬೆಗಳನ್ನು ಬಳಸುವುದು

ನಾವೆಲ್ಲರೂ ಒಬ್ಬರನ್ನೊಬ್ಬರು ನೋಡಲು ಸಾಧ್ಯವಾಗುವಂತೆ ನಾನು ಮತ್ತು ಮಕ್ಕಳು ವೃತ್ತಾಕಾರದಲ್ಲಿ ಕುಳಿತುಕೊಳ್ಳುತ್ತೇವೆ. ಕಥೆಗೆ ಬಳಸಿಕೊಳ್ಳಬಹುದಾದ ಬೆರಳು ಬೊಂಬೆಗಳನ್ನು ಒಂದು ಚೀಲದಲ್ಲಿಟ್ಟು ಮಕ್ಕಳಿಗೆ ಕಣ್ಣುಮುಚ್ಚಲು ಹೇಳುತ್ತೇನೆ, ನಾನು ಮೂರರವರೆಗೆ ಎಣಿಸಿದ ನಂತರ ಕಣ್ಣು ಬಿಡಲು ಹೇಳುತ್ತೇನೆ. ಮೂರರವರೆಗೆ ಎಣಿಸಿಯಾದ ನಂತರ ಮಕ್ಕಳು ತಮ್ಮ ಕಣ್ಣುಗಳನ್ನು ತೆರೆಯುತ್ತಾರೆ, ಆಗ ನಾನು "ಟಟ್ಟಟ್ಟೋ...ಯ್!" ಎಂಬ ವಿಚಿತ್ರ ಶಬ್ದ ಮಾಡುತ್ತಾ ಬೆರಳು ಗೊಂಬೆಯೊಂದನ್ನು ಹೊರತೆಗೆಯುತ್ತೇನೆ.

ನನ್ನ ಬೆರಳಿನ ಮೇಲಿರುವ ಪುಟಾಣಿ ಬಣ್ಣದ ಗೊಂಬೆಯನ್ನು ನೋಡಿದ ಕೂಡಲೇ ಮಕ್ಕಳು ಬಹಳ ಉತ್ಸುಕರಾಗಿ ಆ ಗೊಂಬೆಯ ಹೆಸರನ್ನು ಹಿಡಿದು ದೊಡ್ಡದಾಗಿ ಕೂಗಲು ಶುರು ಮಾಡುತ್ತಾರೆ. ಆಗ, ನಾನು ಮಕ್ಕಳಿಗೆ ಕಥೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಲು ಶುರು ಮಾಡುತ್ತೇನೆ, ಉದಾಹರಣೆಗೆ ಬೆರಳು ಗೊಂಬೆಯು ನರಿಯ ರೂಪದ್ದಾದರೆ ಪ್ರಶ್ನೆಗಳು ಹೀಗಿರುತ್ತವೆ: ಈ ಕಥೆಯಲ್ಲಿ ಈ ಪಾತ್ರದ ಹೆಸರೇನು? ಪಾತ್ರ ಏನು ಹೇಳಿತು? ಹಾಗೆ ಹೇಳಿದ ನಂತರ ಆ ನರಿಗೇನಾಯಿತು? ಇದಕ್ಕೆ ಬರುವ ಪ್ರತಿಕ್ರಿಯೆಗಳನ್ನು ನಾನು ಮುಗುಳ್ನಗೆ ಅಥವಾ ತಲೆಯಲ್ಲಾಡಿಸುವ ಮೂಲಕ ಅಂಗೀಕರಿಸುತ್ತೇನೆ ಅಥವಾ ಅವರ ಸಂವಹನವನ್ನು ವಿಸ್ತರಿಸಲು ಸಹಾಯ ಮಾಡುವ ಇನ್ನೊಂದು ಪ್ರಶ್ನೆಯನ್ನು ಕೇಳುತ್ತೇನೆ. ನಂತರ ಆ ಬೆರಳು ಗೊಂಬೆಯನ್ನು ನಾನು ಮಕ್ಕಳಿಗೆ ದಾಟಿಸುತ್ತೇನೆ. ಎಲ್ಲಾ ಮಕ್ಕಳಿಗೂ ಆ ಬೆರಳು ಗೊಂಬೆಯನ್ನು ತಮ್ಮ ಬೆರಳಿಗೆ ಹಾಕಿಕೊಳ್ಳುವ ಅವಕಾಶ ಸಿಗುವಂತೆ ನೋಡಿಕೊಳ್ಳುತ್ತೇನೆ. ಮೊಟ್ಟಮೊದಲ ಸಲ ತಮ್ಮ ಬೆರಳಿನಲ್ಲಿ ಬೆರಳು ಗೊಂಬೆಗಳನ್ನು ಧರಿಸಿದಾಗ ಮಕ್ಕಳು ಖುಷಿ ತಡೆಯಲಾಗದೆ ಕಿಲಕಿಲ ನಗುತ್ತಾರೆ. ಇದು ಅವರನ್ನು ಮತ್ತಷ್ಟು ಪ್ರೇರೇಪಿಸಿ, ಮುಂದಿನ ಬೆರಳು ಗೊಂಬೆ ಮತ್ತು ಪ್ರಶ್ನೆಗೋಸ್ಕರ ಅವರ ಉತ್ಸುಕತೆಯನ್ನು ಹಾಗೇ ಉಳಿಸಿಕೊಳ್ಳಲು ಸಹಾಯ ಮಾಡುತ್ತದೆ. ಬೆರಳು ಗೊಂಬೆ ಮತ್ತು ಪ್ರಶ್ನೆ ಕೇಳುವ ಈ ಪ್ರಕ್ರಿಯೆಯು ಕಥೆ ಮುಗಿಯುವವರೆಗೂ ಮುಂದುವರಿಯುತ್ತದೆ. ಈ ರೀತಿಯ ಕಲಿಕೆಯ ಪುನರ್ಬಲನವು ಮಕ್ಕಳು ಕಥೆಯನ್ನು ಎಷ್ಟರ ಮಟ್ಟಿಗೆ ಅರ್ಥ ಮಾಡಿಕೊಂಡಿದ್ದಾರೆ ಎಂಬುದನ್ನು ತಿಳಿಯಲು ಶಿಕ್ಷಕರಿಗೆ ಸಹಾಯ ಮಾಡುತ್ತದೆ. ಈ ಮಾಹಿತಿಯನ್ನಿಟ್ಟುಕೊಂಡು ಅವರು ಆ ಕಥೆಯನ್ನು ಮತ್ತೆ ಹೇಳಬಹುದು ಅಥವಾ ಮುಂದಿನ ಕಥೆಗೆ ಹೋಗಬಹುದು.




ಚಿತ್ರ 1 : ಬೆರಳು ಗೊಂಬೆಗಳೊಂದಿಗೆ ಮಕ್ಕಳು

## ಮಕ್ಕಳಿಗೆ ಆಗುವ ಅನುಕೂಲಗಳು

ಆರಂಭಿಕ ವರ್ಷಗಳಲ್ಲಿ, ಮಕ್ಕಳು ಸಾಧಾರಣವಾಗಿ ಒಂದೇ ಚಟುವಟಿಕೆಯಲ್ಲಿ ಹೆಚ್ಚು ಸಮಯ ತೊಡಗಿಸಿಕೊಳ್ಳಲು ಅಶಕ್ತರಾಗಿರುತ್ತಾರೆ. ಬೆರಳುಗೊಂಬೆಗಳಂತಹ ಟಿಎಲ್‌ಎಂಗಳ ಬಳಕೆಯು ಮಕ್ಕಳು ಹೆಚ್ಚು ಕಾಲಾವಧಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಹಾಯ ಮಾಡುತ್ತದೆ. ಮಕ್ಕಳು ಖುಷಿಯ ಮನಸ್ಥಿತಿಯಲ್ಲಿರುವಾಗ ಬೆರಳು ಗೊಂಬೆಗಳು ಮತ್ತು ಯೋಚನೆಗೆ ಹಚ್ಚುವಂತಹ ಪ್ರಶ್ನೆಗಳನ್ನು ಬಳಸಿ ಅವರ ಕಲಿಕೆಯನ್ನು ಪುನರ್ಬಲನಗೊಳಿಸಿದಾಗ, ಮಕ್ಕಳು ತಾವು ಕೇಳಿದ (ಮತ್ತು ಕಲಿತ) ಕಥೆಯನ್ನು ನೆನಪಿಸಿಕೊಂಡು ಪ್ರಶ್ನೆಗಳಿಗೆ ಉತ್ತರಿಸಲು ಉತ್ಸುಕರಾಗುವಂತೆ ಮಾಡುತ್ತದೆ. ಇದಲ್ಲದೆ, ಮಕ್ಕಳ ಪ್ರತಿಕ್ರಿಯೆಗಳಿಗೆ ಶಿಕ್ಷಕರು ತಮ್ಮ ಅಂಗೀಕಾರವನ್ನು ಸೂಚಿಸಿದಾಗ ಮಕ್ಕಳಿಗೆ ಖುಷಿಯಾಗಿ ಚಟುವಟಿಕೆಯಲ್ಲಿ ಹೆಚ್ಚು ಆಸಕ್ತಿ ತೋರಿಸುತ್ತಾರೆ. ಪುನರ್ಬಲನದ ಈ ವಿಧಾನವು ವಿವರಗಳ ಬಗ್ಗೆ ಪರ್ಯಾಲೋಚಿಸಲು ಸಹ ಅವಕಾಶಗಳನ್ನೊದಗಿಸುತ್ತದೆ. ಮತ್ತು ಇದರಲ್ಲಿ ಮೌಖಿಕ ಭಾಷೆಯ ಬೆಳವಣಿಗೆ ಕೂಡ ಆಗುತ್ತದೆ: ಒಂದಾದ ಮೇಲೊಂದರಂತೆ ವಾಕ್ಯಗಳನ್ನು ಹೇಳುವುದರಿಂದ ಅವರ ಗ್ರಹಣಶಕ್ತಿಯ ಸಾಮರ್ಥ್ಯಗಳು ಉತ್ತಮಗೊಳ್ಳುತ್ತವೆ. ಅಭಿನಯಾತ್ಮಕ ಆಟದ ಮೂಲೆ (Dramatic Play Corner) ತರಗತಿಯಲ್ಲಿನ ಬೆರಳುಗೊಂಬೆಯ ಅಭ್ಯಾಸದ ನಂತರ, ಮಕ್ಕಳು ಮುಕ್ತ ಆಟದ ಸಮಯದಲ್ಲಿ ಬಳಸಿಕೊಳ್ಳಲೆಂದು ಆ ಬೆರಳು ಗೊಂಬೆಗಳನ್ನು ಅಭಿನಯಾತ್ಮಕ ಆಟದ ಮೂಲೆಯಲ್ಲಿ ಇಡಲಾಗುತ್ತದೆ. ಬೆರಳು ಗೊಂಬೆಗಳು ಚಿಕ್ಕದಾಗಿ ವರ್ಣಮಯವಾಗಿ, ಮಕ್ಕಳಿಗೆ ಹಿಡಿದುಕೊಳ್ಳಲು ಸುಲಭವಾಗಿರುವುದರಿಂದ ಅವರಿಗೆ ಅದು ಆಕರ್ಷಕವಾಗಿರುತ್ತವೆ. ಇದರಿಂದ ಮಕ್ಕಳು ಅವನ್ನು ತಮ್ಮ ಬೆರಳುಗಳಲ್ಲಿ ಧರಿಸಿ ಒಂದು ಗೊಂಬೆಯ ಪಾತ್ರವನ್ನು ಇನ್ನೊಂದು ಗೊಂಬೆಯ ಪಾತ್ರದೊಡನೆ ಸಂಬಂಧ ಕಲ್ಪಿಸಿ ತಮ್ಮದೇ ಕಥೆಯೊಂದನ್ನು ಹೆಣೆಯುತ್ತಾ ಆಡುತ್ತಾರೆ. ಹಾಗಾಗಿ ವಿರಾಮದ ಸಮಯಾವಕಾಶದಲ್ಲಿ ಬೆರಳುಗೊಂಬೆಗಳ ಸಹಾಯದಿಂದ ಮಕ್ಕಳು ಕಥೆಯ ಬಗ್ಗೆ ತಮಗಿರುವ ದೃಷ್ಟಿಕೋನವನ್ನು ಪುನರ್ಬಲನಗೊಳಿಕೊಳ್ಳುತ್ತಾರೆ.

ಶಿಕ್ಷಕರು ಈ ಬೆರಳು ಗೊಂಬೆಗಳನ್ನು ಬಹು ಪಾತ್ರಗಳಿರುವ ಅಥವಾ ನಿರ್ದಿಷ್ಟ ವಿಷಯವಸ್ತುವಿರುವ ಕಥೆಗಳಿಗೆ ಬಳಸಿಕೊಳ್ಳಬಹುದು. ಉದಾಹರಣೆಗೆ ತರಕಾರಿಗಳ ಬಗ್ಗೆ (ನಿಜವಾದ ತರಕಾರಿಗಳನ್ನಿಟ್ಟುಕೊಂಡು) ಒಂದು ವ್ಯವಸ್ಥಿತ ಸಂಭಾಷಣೆ ನಡೆಸಿದ ಮೇಲೆ, ಶಿಕ್ಷಕರು ತರಕಾರಿಗಳ ಬೆರಳು ಗೊಂಬೆಗಳನ್ನು ಬಳಸಿ ತರಕಾರಿಗಳ ಪರಿಕಲ್ಪನೆಯ ಬಗ್ಗೆ ಮಕ್ಕಳ ತಿಳುವಳಿಕೆಯನ್ನು ಪುನರ್ಬಲನಗೊಳಿಸಲು ಈ ರೀತಿಯ ಪ್ರಶ್ನೆಗಳನ್ನು ಕೇಳಬಹುದು: ಈ ತರಕಾರಿಯ ಹೆಸರೇನು? ಇದರ ಬಣ್ಣವೇನು? ಇದನ್ನು ತಿನ್ನುವುದು/ಅಡುಗೆ ಮಾಡುವುದು ಹೇಗೆ? ಇದರ ಮೇಲ್ಮೈ ಸ್ವರೂಪ ಹೇಗಿದೆ? (ನುಣುಪಾಗಿದೆ, ಗಟ್ಟಿ ಇದೆ, ರಸಭರಿತವಾಗಿದೆ, ಇತ್ಯಾದಿ)

## ಸುತ್ತಲೂ ವಿಸ್ತರಿಸಿದ ಕರಿಹಲಗೆ

ಸುತ್ತಲೂ ವಿಸ್ತರಿಸಿದ ಕರಿಹಲಗೆಯು (Running Black Board – RBB) ಶಾಲಾಪೂರ್ವ ಕಲಿಕಾ ವಲಯದಲ್ಲಿ ಕಾಣಸಿಗುವ ಒಂದು ಭೌತಿಕ ವ್ಯವಸ್ಥೆಯಾಗಿದ್ದು ಇದರಲ್ಲಿ ಗೋಡೆಯ ಮೇಲೆ

ನೆಲದಿಂದ ಒಂದು ಮೀಟರಿನವರೆಗೆ ಕಪ್ಪು ಬಣ್ಣ ಹಚ್ಚಲಾಗಿರುತ್ತದೆ. ಸಾಧಾರಣವಾಗಿ, ವ್ಯವಸ್ಥಿತ ಸಂಭಾಷಣೆಯ ನಂತರ ಅಥವಾ ಕಥೆಯೊಂದರ ನಿರೂಪಣೆಯ ನಂತರ, ಮಕ್ಕಳು ತಮ್ಮ ವಿಚಾರಗಳನ್ನು / ಅನುಭವಗಳನ್ನು ಈ ಆರ್‌ಬಿಬಿಯ ಮೇಲೆ ತಮಗೆ ಬೇಕಾದಂತೆ ಬರೆಯುತ್ತಾರೆ. ಸ್ವತಂತ್ರ ಚಿತ್ರಗಳ ಜೊತೆಯಲ್ಲಿ ಆರ್‌ಬಿಬಿಯಯು ಮಕ್ಕಳಲ್ಲಿ ಕೆಲವು ವಿಷಯವಸ್ತುಗಳು / ಪರಿಕಲ್ಪನೆಗಳನ್ನು ಪುನರ್ಬಲನಗೊಳಿಸಲು ಕೂಡ ಶಿಕ್ಷಕರಿಗೆ ಸಹಾಯ ಮಾಡುತ್ತದೆ.

## ಉದಾಹರಣೆ 1

'ನನ್ನ ಕುಟುಂಬ'ದ ಬಗ್ಗೆ ವ್ಯವಸ್ಥಿತವಾದ ಸಂಭಾಷಣೆಯನ್ನು ನಡೆಸಿಯಾದ ಮೇಲೆ, ನಾನು ಮಕ್ಕಳಿಗೆ ತಾವು ಈಗಷ್ಟೇ ಚರ್ಚಿಸಿದ ವಿಷಯದ ಬಗ್ಗೆ ಚಿತ್ರ ಬಿಡಿಸಲು ಅವಕಾಶ ಮಾಡಿಕೊಟ್ಟೆ. ಆರ್‌ಬಿಬಿಯ ಹತ್ತಿರವೇ ಕುಳಿತಿದ್ದ ಮಕ್ಕಳೆಲ್ಲಾ ಬಂದು ಚಿತ್ರ ಬಿಡಿಸಲು ಶುರು ಮಾಡಿದರು. ನಾನು ಪ್ರತಿ ಮಗುವಿನ ಬಳಿಗೂ ಹೋಗಿ ಅವರೇನು ಬಿಡಿಸಿದ್ದಾರೆ ಎಂದು ಕೇಳಿದೆ.

ಒಂದು ಮಗು ವೃತ್ತದಂತಹ ಆಕಾರವೊಂದನ್ನು (ಚಿತ್ರ 2) ಬಿಡಿಸಿತ್ತು, ಅದರೊಡನೆ ನಡೆದ ಸಂವಾದ ಹೀಗೆ ಶುರುವಾಯಿತು
ನಾನು(ಆ ಆಕೃತಿಯೆಡೆಗೆ ಬೊಟ್ಟು ತೋರಿಸಿ): ಇದೇನು?

ಮಗು: ಇದು ನಮ್ಮ ಮನೆ
ನಾನು: ನಿಮ್ಮ ಮನೆಯಲ್ಲಿ ಯಾರೆಲ್ಲಾ ಇದ್ದಾರೆ?
ಮಗು: ನಾನು, ನನ್ನ ಅಮ್ಮ, ಅಪ್ಪ,ಅಕ್ಕ.
ನಾನು: ಬಹಳ ಒಳ್ಳೆಯದು! ಇದೇನು? (ಕೊಂಚ ಗೀಚಿದ್ದನ್ನು ತೋರಿಸುತ್ತಾ)
ಮಗು: ಇವು ಮನೆಯಲ್ಲಿರೋ ಎಮ್ಮೆ ಮತ್ತು ಆಡುಗಳು. ನನ್ನ ಅಜ್ಜ ದಿನಾ ಎಮ್ಮೆ ಹಾಲು ಕರೆಯುತ್ತಾರೆ. ನನಗೆ ಹಾಲೆಂದರೆ ಇಷ್ಟ.
ನಾನು: ಇದು ಬಹಳ ಚೆನ್ನಾಗಿದೆ. ಆಡುಗಳೇನು ಮಾಡುತ್ತವೆ? ಅವೂ ಹಾಲು ಕೊಡುತ್ತವಾ?
ಮಗು: ಹೌದು, ಆದರೆ ನಾವು ಆಡಿನ ಹಾಲು ಕುಡಿಯೋದಿಲ್ಲ. ಅದರ ಮರಿಗಳು ಕುಡಿಯುತ್ತವೆ.



**ಚಿತ್ರ 2. ಮಗುವೊಂದು ವಿಸ್ತರಿತ ಕಪ್ಪು ಹಲಗೆಯ ಮೇಲೆ ಬರೆಯುತ್ತಿರುವುದು**

ನಾನು (ಮನೆ ಪಕ್ಕದಲ್ಲಿರುವ ಚುಕ್ಕಿಯೊಂದನ್ನು ತೋರಿಸುತ್ತಾ): ಇದೇನು?
ಮಗು: ಇದು ನಮ್ಮ ಹೊಸ ಬೈಕ್.
ನಾನು: ಅದನ್ನು ಯಾರು ಬಳಸುತ್ತಾರೆ?
ಮಗು: ನಮ್ಮಪ್ಪ ಅವರ ಕಂಪನಿಗೆ(ಕೆಲಸಕ್ಕೆ) ಹೋಗಲು ಬಳಸುತ್ತಾರೆ. ನಿನ್ನೆ ನಾನು ಮತ್ತೆ ನನ್ನ ಅಕ್ಕ ಆ ಬೈಕಿನ ಮೇಲೆ ದಾವತ್ತಿಗೆ (ಭೋಜನ) ಹೋಗಿದ್ವಿ.
ನಾನು: ಚೆನ್ನಾಗಿದೆ. ನೀನು ನಿನ್ನ ಕುಟುಂಬದ ಬಗ್ಗೆ ಚೆನ್ನಾಗಿ ಚಿತ್ರ ಬಿಡಿಸಿದ್ದೀಯಾ.
ಆಮೇಲೆ, ನಾನು ಮತ್ತೊಬ್ಬ ಮಗುವಿನ ಹತ್ತಿರ ಹೋಗಿ ಇದೇ ರೀತಿಯ ಸಂಭಾಷಣೆಯನ್ನು ಶುರು ಮಾಡಿದೆ.

### ಉದಾಹರಣೆ 2:

ಮಗುವೊಂದರೊಡನೆ ಇನ್ನೊಂದು ಸಂದರ್ಭದಲ್ಲಿ ನಡೆಸಿದ ಪುನರ್ಬಲನದ ಸಂಭಾಷಣೆ ಹೀಗಿದೆ. ಇಲ್ಲಿ ಕಥೆಯ ನಿರೂಪಣೆಯ ನಂತರ ಆರ್‌ಬಿಬಿಯನ್ನು ಬಳಸಲಾಗಿತ್ತು. ನಾನು (ಮಗು ಗೀಚಿದ್ದನ್ನು ತೋರಿಸುತ್ತಾ): ಇದೇನು?

ಮಗು: ಇದೊಂದು ಚೆಂಡು; ಅವನಿಗೆ ಅವನ ಹೆಸರೇ ಮರೆತುಹೋಯಿತು, ಅದಕ್ಕೆ ಅವನು ಬಾಗಿಲ ಹತ್ತಿರ ಹೋಗಿ ತನ್ನ ಹೆಸರು ಹೇಳೆಂದು ಕೇಳಿದ.
ನಾನು: ಸರಿ. ಆಮೇಲೆ? ಏನಾಯಿತು? ಬಾಗಿಲು ಅವನ ಹೆಸರು ಹೇಳಿತಾ?
ಮಗು: ಇಲ್ಲ, ಅದು ಹೆಸರು ಹೇಳಲಿಲ್ಲ ಅದಕ್ಕೆ ಚೆಂಡು ಇಲ್ಲಿ, ಪೊರಕೆಯ ಹತ್ತಿರ ಬಂತು (ಇನ್ನೊಂದು ಗೀಚು ಚಿತ್ರವನ್ನು ತೋರಿಸುತ್ತಾ)
ನಾನು: ಒಳ್ಳೆಯದು! ಚೆಂಡು ಆವಾಗೇನು ಮಾಡಿತು?
ಮಗು: ಆ ಪೊರಕೆ ಕೂಡ (ಚೆಂಡಿನ) ಹೆಸರು ಏನೆಂದು ತನಗೆ ಗೊತ್ತಿಲ್ಲ ಎಂದುಬಿಟ್ಟಿತು.
ನಾನು: ಅಯ್ಯೋ! ಆ ಚೆಂಡು ಆಮೇಲೇನು ಮಾಡಿತು?
ಮಗು: ಚೆಂಡು ಬ್ಯಾಟಿನ ಹತ್ತಿರ ಹೋಯಿತು ( ಅವಳು ಬರೆದಿದ್ದ ಒಂದು ಗೆರೆಯನ್ನು ತೋರಿಸುತ್ತಾ) ಮತ್ತೆ ತನ್ನ ಹೆಸರು ಏನೆಂದು ಹೇಳಬೇಕೆಂದು ಬ್ಯಾಟಿನ ಹತ್ತಿರ ಕೇಳಿತು.
ನಾನು:ಸರಿ, ಬ್ಯಾಟು ಚೆಂಡಿನ ಹೆಸರು ಹೇಳಿತಾ?
ಮಗು (ಖುಷಿಯಿಂದ):ಹೌದು! ಬ್ಯಾಟು, 'ನಿನ್ನ ಹೆಸರು ಚೆಂಡು, ನನ್ನ ಹೆಸರು ಬ್ಯಾಟು, ನಾವಿಬ್ಬರೂ ಒಳ್ಳೆಯ ಗೆಳೆಯರು' ಎಂದು ಹೇಳಿತು.
ನಾನು: ಬಹಳ ಚೆನ್ನಾಗಿದೆ! ನೀನು ಚೆಂಡಿನ ಕಥೆಯ ಚಿತ್ರ ಬಿಡಿಸಿ ಬಹಳ ಚೆನ್ನಾಗಿ ಅದನ್ನು ಹೇಳಿದೆ.

### ಮಕ್ಕಳಿಗೆ ಆಗುವ ಅನುಕೂಲಗಳು

ಮಕ್ಕಳು 'ಆರ್‌ಬಿಬಿ'ಯನ್ನು ತಮ್ಮ ವಿಚಾರಗಳು ಮತ್ತು ಅನುಭವಗಳನ್ನು ತಮಗೆ ಬೇಕಾದ ಹಾಗೆ ನಿರ್ಭಿಡೆಯಿಂದ ವ್ಯಕ್ತಪಡಿಸಲು ಬಳಸಿಕೊಳ್ಳುತ್ತಾರೆ. ಕೆಲವು ಮಕ್ಕಳು ಗೀಚಿದರೆ ಇನ್ನು ಕೆಲವರು ಚಿತ್ರದ ರೂಪವನ್ನು ಬಳಸಿಕೊಳ್ಳುತ್ತಾರೆ. ತಾವು ಬರೆದಂತಹ ಚಿತ್ರದ ಬಗ್ಗೆ ಚರ್ಚಿಸುವುದರಿಂದ ಆ ಮಕ್ಕಳಿಗೆ ತಮ್ಮ ಕಲಾ ಪ್ರಕಾರದೊಡನೆ ಹಿಂದಿನ ಸಂಭಾಷಣೆಗಳನ್ನು (ಕಥೆ/ ವಿಷಯವಸ್ತುವಿನ ಚರ್ಚೆ) ತಳುಕು ಹಾಕಿ ಮಾತಾಡಲು ಪ್ರೇರೇಪಿಸಿದಂತಾಗುತ್ತದೆ. ಈ ಪ್ರಕ್ರಿಯೆಯಲ್ಲಿ, ಒಂದು ಸೃಜನಾತ್ಮಕ ಹಾದಿಯಲ್ಲಿ ಕಲಿತುದಕ್ಕೆ ವಿದ್ಯಾರ್ಥಿಗಳು ಯೋಚಿಸಿ ಪ್ರತಿಕ್ರಿಯಿಸಲು ಸಾಧ್ಯವಾಗುತ್ತದೆ. ಮಗುವೊಂದರ ಕಲಿಕೆಯನ್ನು ಪುನರ್ಬಲನಗೊಳಿಸಲು ಶಿಕ್ಷಕರು ಬಳಸಬಹುದಾದ ಅತೀ ಪರಿಣಾಮಕಾರಿ ವಿಧಾನಗಳಲ್ಲಿ ಆರ್‌ಬಿಬಿ ಕೂಡ ಒಂದು. ಕೆಲವು ಮಕ್ಕಳು ಮಾತನಾಡುವುದಕ್ಕೆ, ಅವರ ವಿಚಾರಗಳನ್ನು ಅಭಿವ್ಯಕ್ತಿಸುವುದಕ್ಕೆ ಅಥವಾ ದೊಡ್ಡ ಗುಂಪಿನಲ್ಲಿ ಶಿಕ್ಷಕರಿಗೆ ಪ್ರತಿಕ್ರಿಯೆ ನೀಡಲು ಹಿಂಜರಿಯುತ್ತಾರೆ. ಆದರೆ ಆರ್‌ಬಿಬಿಯನ್ನು ಬಳಸಿಕೊಂಡು ನಡೆಸುವ ಪ್ರತ್ಯೇಕ ಮುಖಾಮುಖಿ ಮಾತುಕತೆಯಲ್ಲಿ ಅವರು ಮುಜುಗರವಿಲ್ಲದೆ ಮಾತನಾಡುತ್ತಾರೆ ಹಾಗೂ ಶಿಕ್ಷಕರ ಪ್ರಶ್ನೆಗೆ ಉತ್ತರವಾಗಿ ಅವರೇನು ಚಿತ್ರ ಬಿಡಿಸಿದ್ದಾರೆಯೋ ಅದರ ಬಗ್ಗೆ ಸಂತೋಷದಿಂದ ಸಂಭಾಷಿಸುತ್ತಾರೆ.

ಮಗುವಿನ ಪ್ರತಿಕ್ರಿಯೆಗಳಿಗೆ ಶಿಕ್ಷಕರು ನೀಡುವ ಅಂಗೀಕಾರದಿಂದ ಮಕ್ಕಳಿಗೆ ಮಾನ್ಯತೆ ಸಿಕ್ಕಂತಾಗಿ ಅದು ಅವರ ಚಿತ್ರ ಬಿಡಿಸುವ ಕೌಶಲದೊಡನೆ ಅವರ ಆತ್ಮವಿಶ್ವಾಸ ಉತ್ತಮಗೊಳ್ಳುವುದಕ್ಕೂ ಕಾರಣವಾಗುತ್ತದೆ. ಇದು ಮಕ್ಕಳಲ್ಲಿ ಶಿಕ್ಷಕರೆಡೆಗೆ ಇರುವ ನಂಬಿಕೆಯನ್ನು ಗಾಢಗೊಳಿಸುವುದಲ್ಲದೆ, ಶಿಕ್ಷಕರು ಈ ಬಂಧವನ್ನು ಬಳಸಿಕೊಂಡು ಅಂತಹ ಮಕ್ಕಳನ್ನು ಕ್ರಮೇಣವಾಗಿ ದೊಡ್ಡ ಗುಂಪುಗಳ ಭಾಗವಾಗಿಸಿ ಅಲ್ಲಿ ಮಾತನಾಡುವಂತೆ (ಇದೊಂದು ಅತ್ಯಾವಶ್ಯಕವಾದ ಸಾಮಾಜಿಕ ಕೌಶಲ) ಅವರನ್ನು ಪ್ರೇರೇಪಿಸಲು ಸಾಧ್ಯವಾಗುತ್ತದೆ.

'ಆರ್‌ಬಿಬಿ'ಯ ಬಳಕೆಯು ಮಕ್ಕಳು ಬರೆವಣಿಗೆಯ ಸಾಧನ ಉಪಕರಣವನ್ನು ಹಿಡಿದು ಗೀಚುವುದು ಅಥವಾ ಚಿತ್ರ ಬಿಡಿಸುವುದು ಇಂಥವೇ ಆದ ತಮ್ಮ ಸೂಕ್ಷ್ಮ ಚಾಲನ ಕೌಶಲಗಳನ್ನು (fine motor skills) ಪುನರ್ಬಲನಗೊಳಿಸುವ ಚಟುವಟಿಕೆ ಕೂಡ ಆಗಿದೆ. ಇದು ನಂತರದಲ್ಲಿ ಮಕ್ಕಳಿಗೆ ಬರೆವಣಿಗೆಯ ಸಾಧನ ಉಪಕರಣವನ್ನು ಸದೃಢವಾದ ಹಿಡಿತದೊಂದಿಗೆ ಬಳಸಲು ಸಹಾಯ ಮಾಡುತ್ತದೆ.

### ಉಪಸಂಹಾರ

ಮಕ್ಕಳ ಕಲಿಕೆಯ ಮಟ್ಟಗಳನ್ನು ವೈಯಕ್ತಿಕವಾಗಿ ಅರ್ಥ ಮಾಡಿಕೊಳ್ಳುವುದು ಮತ್ತು ಅವರಲ್ಲಿ ಈಗಾಗಲೇ ಉಂಟಾದ ಕಲಿಕೆಯನ್ನು ಪುನರ್ಬಲನದ ಮೂಲಕ ಬಲಪಡಿಸುವುದು ಬಹಳ ಆವಶ್ಯಕವಾಗಿದೆ. ಮಕ್ಕಳ ಕಲಿಕೆಯನ್ನು ಪುನರ್ಬಲನಗೊಳಿಸಲು ಬೆರಳು ಗೊಂಬೆಗಳು ಮತ್ತು ಆರ್‌ಬಿಬಿಗಳಂಥ ವಿಧಾನಗಳು ಶಿಕ್ಷಕರು ಮಕ್ಕಳೊಂದಿಗೆ ನಿಯಮಿತವಾಗಿ ಬಳಸಲು

ಪ್ರಯತ್ನಿಸಬಹುದಾದ ಎರಡು ವಿಧಾನಗಳಾಗಿವೆ. ಬೆರಳು ಗೊಂಬೆಗಳು, ಅವುಗಳಿಗೆ ಸಂಬಂಧಿಸಿದಂತೆ ಮಕ್ಕಳು ಏನು ಕಲಿತರೋ ಅದನ್ನು ಯೋಚಿಸಿ ನೆನಪಿಸಿಕೊಳ್ಳುವುದಕ್ಕೆ ಸಹಾಯ ಮಾಡುವುದರ ಜೊತೆಗೆ, ಅವರಲ್ಲಿ ಉತ್ಸುಕತೆಯನ್ನು ಉಂಟುಮಾಡುತ್ತದೆ. ಹಾಗೆಯೇ 'ಆರ್‌ಬಿಬಿ'ಯನ್ನು ಬಳಸಿದಾಗ ಮಕ್ಕಳು ಯಾವುದೇ ಒತ್ತಡವಿಲ್ಲದೇ ಎಗ್ಗಿಲ್ಲದ ಕೈಗಳ ಚಲನೆಗಳ ಮೂಲಕ ತಮ್ಮ ವಿಚಾರಗಳನ್ನು ಬಿಡಿಸುವುದರಿಂದ ಅವರು ನಿರ್ಭಿಡೆಯಿಂದ ಮಾತನಾಡಲು ಸಹಾಯ ಮಾಡುತ್ತದೆ. ಹಾಗಾಗಿ ಈ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸಿ ಅವರ ಕಲಿಕೆಯನ್ನು ಪುನರ್ಬಲನಗೊಳಿಸಲು ಶಿಕ್ಷಕರಿಗೆ ಸುಲಭವಾಗುತ್ತದೆ.



**ಸಾಯಿ ಪ್ರವೀಣ್ ಮದ್ದಿರಾಲ** ಅವರು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಸಂಗಾರೆಡ್ಡಿಯಲ್ಲಿರುವ ಜಿಲ್ಲಾ ಸಂಸ್ಥೆಯಲ್ಲಿ ಆರಂಭಿಕ ಬಾಲ್ಯ ಶಿಕ್ಷಣದ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಶಿಕ್ಷಕರ ಅಭ್ಯಾಸ ಮತ್ತು ವಿದ್ಯಾರ್ಥಿಗಳ ಬೆಳವಣಿಗೆಯಲ್ಲಿ ಸುಸ್ಥಿರ ಬದಲಾವಣೆಗಳನ್ನು ತರುವ ನಿಟ್ಟಿನಲ್ಲಿ ಆರಂಭಿಕ ಬಾಲ್ಯ ಕಾಲದ ಶಿಕ್ಷಣದ ಮೇಲೆ ಕಾರ್ಯನಿರ್ವಹಿಸುವುದು ಅವರ ಆಸಕ್ತಿಯ ವಿಷಯವಾಗಿದೆ. ನಿಸರ್ಗ ರಮಣೀಯ ಸ್ಥಳಗಳಿಗೆ ಪ್ರಯಾಣ ಮಾಡುವುದನ್ನು ಅವರು ಇಷ್ಟಪಡುತ್ತಾರೆ. ಅವರನ್ನು maddirala.praveen@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಸ್ವಯಂಪ್ರಭಾ ಹೆಗಡೆ** | ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**